# ಸಾರ್ವಜನಿಕ ಪ್ರಕಟಣೆ

**ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಕಾಯ್ದೆ 1976ರ ಪ್ರಕರಣ 10ರ ಅನ್ವಯ ವೃತ್ತಿ ತೆರಿಗೆ ಪಾವತಿ ಮಾಡುವ ಬಗ್ಗೆ.**

1. ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಕಾಯ್ದೆ 1976ರ ಅಡಿಯಲ್ಲಿ ತೆರಿಗೆ ಪಾವತಿಸಲು ಬಾಧ್ಯಸ್ಥರಾಗಿರುವ ಎಲ್ಲಾ ವ್ಯಕ್ತಿಗಳು ನೋಂದಣಿ/ಎನ್‌ರೋಲ್‌ಮೆಂಟ್ ಪಡೆದು ತೆರಿಗೆ ಪಾವತಿಸತಕ್ಕದ್ದು.

2. ನೋಂದಣಿ ಪಡೆಯಲು ಅಥವಾ ಎನ್‌ರೋಲ್‌ಮೆಂಟ್ ಮಾಡಿಕೊಳ್ಳಲು ಬಾಧ್ಯತೆ ಹೊಂದಿರುವ ಪ್ರತಿ ಉದ್ಯೋಗದಾತ / ಸ್ವಯಂ ಉದ್ಯೋಗ ನಡೆಸುವ ಪ್ರತಿ ವ್ಯಕ್ತಿಯು ತನ್ನ ವೃತ್ತಿ, ವ್ಯಾಪಾರ, ಆಜೀವಿಕೆ ಮತ್ತು ಉದ್ಯೋಗ ಪ್ರಾರಂಭಿಸಿದ 30 (ಮೂವತ್ತು) ದಿನಗಳ ಒಳಗಾಗಿ ನೋಂದಣಿ / ಎನ್‌ರೋಲ್ ಮೆಂಟನ್ನು ಆನ್‌ಲೈನ್ ಮುಖಾಂತರ ಪಡೆದು ತೆರಿಗೆ ಪಾವತಿಸತಕ್ಕದು.

3. ಈಗಾಗಲೇ ಎನ್‌ರೋಲ್‌ಮೆಂಟ್ ಹೊಂದಿರುವ ಉದ್ಯೋಗದಾತರು / ಸ್ವಯಂ ಉದ್ಯೋಗಸ್ಥರು 2026-2027ನೇ ಸಾಲಿನ ವೃತ್ತಿ ತೆರಿಗೆಯನ್ನು ದಿನಾಂಕ: 30-04-2026 ರ ಒಳಗಾಗಿ ಪಾವತಿಸತಕ್ಕದ್ದು.

4. 2026ರ ಕರ್ನಾಟಕ ಅಧಿನಿಯಮ ಸಂಖ್ಯೆ. 22 ದಿನಾಂಕ: 27.03.2026 ರನ್ವಯ ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಅಧಿನಿಯಮ 1976ರ ಪ್ರಕರಣ 10ಕ್ಕೆ ಮಾಡಲಾದ ತಿದ್ದುಪಡಿಯ ಮೂಲಕ ಅನುಷ್ಠಾನಗೊಳಿಸಲಾದ ಬದಲಾವಣೆಗಳು:-

    (i) ಎನ್‌ರೋಲ್‌ಮೆಂಟ್ ಹೊಂದಿರುವ (ದಾಖಲಾದ) ವ್ಯಕ್ತಿಗಳು (**EC ಪ್ರಮಾಣ ಪತ್ರ**) ಸಂದಾಯ ಮಾಡಬೇಕಾದ ತೆರಿಗೆಯನ್ನು ಪಾವತಿಸಿದ್ದಲ್ಲಿ ರಿಟರ್ನ್ ಸಲ್ಲಿಸುವುದು ಅಗತ್ಯವಿರುವುದಿಲ್ಲ.

    (ii) ವಾಣಿಜ್ಯ ತೆರಿಗೆಗಳ ಆಯುಕ್ತರ ಅಧಿಸೂಚನೆ ಸಂಖ್ಯೆ. ಪಿಟಿ/ಸಿಆರ್/09/2025-26 ದಿನಾಂಕ: 01-04-2026 ರನ್ವಯ ವೃತ್ತಿ ತೆರಿಗೆಯಿಂದ ವಿನಾಯತಿ ಹೊಂದಿರುವ ದಾಖಲಾದ (enrolled) ವ್ಯಕ್ತಿಗಳು ಅಂದರೆ ಹಿರಿಯ ನಾಗರಿಕರು, ವಿಕಲಚೇತನ ವ್ಯಕ್ತಿಗಳು, ಮಾಜಿ ಸೈನಿಕರು ಮುಂತಾದವರು ಸದರಿ ಅಧಿಸೂಚನೆಯನ್ವಯ ನಿಯಮಿಸಿರುವ ದಾಖಲಾತಿಗಳನ್ನು ಸಲ್ಲಿಸಿದ್ದಲ್ಲಿ ರಿಟರ್ನ್ ಸಲ್ಲಿಸುವುದು ಅಗತ್ಯವಿರುವುದಿಲ್ಲ

5. ಸದರಿ ಕಾಯ್ದೆಯಡಿ ನೋಂದಣಿ / ಎನ್‌ರೋಲ್‌ಮೆಂಟ್ ಬಾಧ್ಯತೆ ಹಾಗೂ ತೆರಿಗೆ ದರಗಳ ಬಗ್ಗೆ ತಿಳಿದುಕೊಳ್ಳುಲು ಇಲಾಖೆಯ ಜಾಲತಾಣ: **gst.karnataka.gov.in** ಅಥವಾ **ptax.karnataka.gov.in** ಇಲ್ಲಿಗೆ ಭೇಟಿ ನೀಡಬಹುದು.

(ವಿಪುಲ್ ಬನ್ಸಾಲ್)
ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ), ಬೆಂಗಳೂರು

ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ) ಬೆಂಗಳೂರು